O.S. 7686/2013

PW2

ದಿನಾಂಕಃ **10.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀಆರ್.**ಬಿ.ಆರ್** ರವರಿಂದಃ

ನಾನು ಅವಿಧ್ವವಂತ. ನಾನು ವಾಸ ಮಾಡುತ್ತಿರುವ ವಡ್ಡಪಾಳ್ಯದಲ್ಲಿಯ ನನ್ನ ಮನೆಯ ನಂಬರ್ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಮಾರಪ್ಪ ಅಲಿಯಾಸ್ ಮೋಟಪ್ಪ ಎಂದು ಸಾಬೀತಿಗಾಗಿ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ವಕೀಲರು ಅವರ ಕಛೇರಿಯಲ್ಲಿ ತಯಾರಿಸಿರುತ್ತಾರೆ. ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರಿಕ ಕಾಲಕ್ಕೆ ನಾನು ಮತ್ತು ವಾದಿ ನಾರಾಯಣಪ್ಪ ವಕೀಲರ ಕಛೇರಿಗೆ ಒಟ್ಟಿಗೆ ಭೇಟಿ ಕೊಟ್ಟಿದ್ದೇವು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರಿ ಮಾಡಲು ವಾದಿ ನಾರಾಯಣಪ್ಪ ಅವರ ಪರ ವಕೀಲರಿಗೆ ಯಾವುದೇ ಮಾಹಿತಿ ನೀಡಿಲ್ಲ. ದಾವಾ ಸ್ವತ್ತಿನ ನಂಬರ್ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಗೆ ಯಾವ ಆಧಾರದ ಮೇಲೆ ಬಂದಿರುತ್ತದೆ ಎನ್ನುವ ವಿಷಯ ನನಗೆ ಮತ್ತು ಈ ಬಗೆಗಿನ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಸ್ವತ್ತಿನಲ್ಲಿನ ಕಟ್ಟಡದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸಂದ್ರಮ್ಮ, ನಾಗರಾಜ್ ಮತ್ತು ಗೋಪಿ ರವರಿಗೆ ಸಂಬಂಧಿಸಿ ಸ್ವತ್ತುಗಳ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಪೊಲೀಸ್ ಮುನಿಸ್ವಾಮಪ್ಪನವರ ಸ್ವತ್ತು ಉಂಟಾಗುತ್ತದೆ. ಪೊಲೀಸ್ ಮುನಿಸ್ವಾಮಪ್ಪ ತಂದೆಯ ಹೆಸರು ನನಗೆ ಗೌತ್ತಿಲ್ಲ. ಮುನಿಸ್ವಾಮಪ್ಪನವರ ರವರ ಸ್ವತ್ತಿನ ನಂಬರ್ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಸ್ವತ್ತಿನ ನಂಬರ್ ನನಗೆ ಗೊತ್ತಿಲ್ಲ.

ಸಾಕ್ಷಿಯು ಮುಂದುವರೆದು ರಾಮಯ್ಯ ರವರ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ರಾಮಯ್ಯ ರವರ ಸ್ವತ್ತು ದಾವಾ ಸ್ವತ್ತಿನ ಪೂರ್ವಕ್ಕೆ ಉಂಟಾಗುತ್ತದೆ ಎಂಬ ಸಾಬೀತಿಗಾಗಿ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ನನ್ನ ಸ್ವತ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ಸೇರಿದ ಸ್ವತ್ತನ್ನು ನನ್ನ ತಾಯಿಗೆ ಅವರ ತಂದೆ ಕೊಟ್ಟಿದ್ದರು. ಸದರಿ ಸ್ವತ್ತನ್ನು ನನ್ನ ತಾಯಿಯ ತಂದೆ ನನ್ನ ತಾಯಿ ಬಾಯಿ ಮಾತಿನಲ್ಲಿ ಕೊಟ್ಟಿದ್ದರು ಮತ್ತು ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ. ನನ್ನ ತಾತನ ಹೆಸರು ಮೋಟಪ್ಪ. ನನ್ನ ತಾತ ಮೋಟಪ್ಪನಿಗೆ ಅವರ ಸೇರಿದ ಸ್ವತ್ತು ಗಡಿಗ ಬಿನ್ ಮುನಿಯ ಎಂಬುವರಿಂದ ಬಂದಿರುತ್ತದೆ. ಈ ಬಗೆಗಿನ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

ದಾವಾ ಸ್ವತ್ತಿನ ಉತ್ತರಕ್ಕೆ ಕಾಂಪೌಂಡ್ ಇರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನನ್ನ ತಾಯಿಗೆ ಸೇರಿದ ಮನೆ ಇರುತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನನ್ನ ತಾಯಿಗೆ ಸೇರಿದ ಸ್ವತ್ತು ಇರುತ್ತದೆ ಎಂಬ ಸಾಬೀತಿಗಾಗಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿದ ಕಂದಾಯ ರಶೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದಾವಾ ಸ್ವತ್ತಿನ ಪಕ್ಕ ವಾಸ ಮಾಡುತ್ತಿದ್ದೇನೆ ಎಂಬ ಸಾಬೀತಿಗಾಗಿ ನಾನು ನನಗೆ ಸೇರಿದ ಪಡಿತರ ಚೀಟಿ, ಆಧಾರ್ ಕಾರ್ಡ್ ಆಗಲಿ ಅಥವಾ ಚುನಾವಣೆ ಗುರುತಿನ ಚೀಟಿ ಆಗಲಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದಾವಾ ಸ್ವತ್ತು ನೈಜ್ಯ ರೂಪದಲ್ಲಿ ಅಸ್ತಿತ್ವದಲ್ಲಿ ಇರುವುದಿಲ್ಲ ಮತ್ತು ದಾವಾ ಸ್ವತ್ತು ಕಾಲ್ಪನಿಕ ಸ್ವತ್ತಾಗಿರುತ್ತದೆ ಎಂದರೆ ರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಇರುತ್ತದೆ ಎಂದು ಕಾಲ್ಪನಿಕ ಆಧಾರಿತ ಹೇಳಿಕೆ

ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿ ನಾರಾಯಣಪ್ಪ ಇರಾದೆ ಮೇರೆಗ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿದ್ದೆ ಎಂದರೆ ಸರಿ. ನಾನು ನನ್ನ ಸಾಕ್ಷಿಯನ್ನು ವಾದಿಗೆ ಅನುಕೂಲ ಆಗಲಿ ಎಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ಕಾಲ್ಪನಿಕ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಪ್ರತಿವಾದಿಯಿಂದ ಹಣ ವಸೂಲಿಗಾಗಿ ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ತೊಂದರೆ ಕೊಡಬೇಕು ಮತ್ತು ಪ್ರತಿವಾದಿಯಿಂದ ಹಣ ವಸೂಲಿ ಮಾಡಬೇಕು ಎನ್ನುವ ಕಾರಣಕ್ಕಾಗಿ ನಾನು ನನಗೆ ಸಂಬಂಧಿಸಿದ ನನ್ನ ವೈಯಕ್ತಿಕ ಯಾವುದೇ ಗುರುತು ಚೀಟಿಯನ್ನು ನಾನು ನ್ಯಾಯಾಲಯಕ್ಕೆ ನೀಡಿಲ್ಲ ಎರದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.

O.S. 7686/2013

PW2